# ಆಯುರ್ವೇದ ಚಿಕಿತ್ಸಾ ಕೇಂದ್ರಗಳಲ್ಲಿ ಯೇ ಮೊದಲನೇಯದ್ದಾದ 'ಅರ್ಥ್' ತನ್ನ ಐದನೇ ವಾರ್ಷಿಕೋತ್ಸವ ಆಚರಿಸಲಿದೆ.

ಬೆಂಗಳೂರು, ಮಾ. 11- ಸಾಂಪ್ರಾದಾಯಿಕ ಚಿಕಿತ್ಸಾ ವಿಧಾನದ ಮೂಲಕ ಆರೋಗ್ಯಕರ ಜೀವನಕ್ಕೆ ಬದ್ಧವಾಗಿರುವ 'ಅರ್ಥ್' ಕಳೆದ ಐದು ವರ್ಷಗಳಿಂದ ವ್ಯಕ್ತಿಗಳ ಆರೋಗ್ಯ ರಕ್ಷಣೆ ಮತ್ತು ಉತ್ತಮ ಜೀವನಕ್ಕೆ ಬದ್ಧವಾಗಿ ಸೇವೆ ಸಲ್ಲಿಸುತ್ತ ಬಂದಿದೆ. ಪ್ರತಿಯೊಬ್ಬ ವ್ಯಕ್ತಿ ಆರೋಗ್ಯದಿಂದ ಇರಬೇಕು ಅಥವಾ ಆರೋಗ್ಯಕರ ಜೀವನ ನಡೆಸಲು ಸಶಕ್ತನಾಗಿರಬೇಕು ಎನ್ನುವುದು 'ಅರ್ಥ್'ದ ಮೂಲ ಮಂತ್ರವಾಗಿದೆ.

ಹೋಟೆಲ್ ಅಶೋಕದಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯನ್ನಾದ್ದೇಶಿಸ ಮಾತನಾಡಿದ ಅರ್ಥ್‌ನ ವೈದ್ಯಕೀಯ ನಿರ್ದೇಶಕ ಡಾ. ಪ್ರಶಾಂತ್ ಆಚಾರ್ಯ ಮಾತನಾಡಿ ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದಿರುವ ಚಿಕಿತ್ಸಾ ವಿಧಾನವು ಆಧುನಿಕ ಕಾಯಿಲೆಗಳನ್ನು ಪರಿಣಾಮಕಾರಿಯಾಗಿ ಗುಣಮಡಿಸು ತ್ತಿದೆ. ಆಯುರ್ವೇದದ ವೈಜ್ಞಾನಿಕ ಮತ್ತು ನೈಸರ್ಗಿಕ ಚಿಕಿತ್ಸಾ ವಿಧಾನ ಅಳವಡಿಸಿಕೊಂಡಿರುವ ಈ ಅತ್ಯಾಧು ನಿಕ ಕೇಂದ್ರದ ಆಯುರ್ವೇದ ವಿಜ್ಞಾನದ ಸಾಂಪ್ರದಾಯಿಕ ಅಗತ್ಯ ಗಳನ್ನೂ ಪೂರೈಸುತ್ತಿದೆ ಎಂದು ಹೇಳಿದರು.

ಕಳೆದ ಐದು ವರ್ಷಗಳಿಗೂ ಹೆಚ್ಚು ಅವಧಿಯಲ್ಲಿ ವೈವಿಧ್ಯಮಯ ಕಾಯಿಲೆಗಳಿಂದ ಬಳುಲುತ್ತಿದ್ದ ಹತ್ತು ಸಾವಿರಕ್ಕೂ ಹೆಚ್ಚು ಜನ ಕಾಯಿಲೆ ಗುಣಪಡಿಸಲಾಗಿದೆ. ದೇಶ ವಿದೇಶಗಳಿಂದ ಬಂಧು ಇಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ.

ಬೆನ್ನು ನೋವು, ಮಧುಮೇಹ, ಉದ್ವಿಗ್ನತೆ, ಕೇಶ ಮತ್ತು ಚರ್ಮ ರಕ್ಷಣೆ, ಲೈಂಗಿಕ ದೌರ್ಬಲ್ಯ, ನರ ರೋಗ, ಒತ್ತಡ ಸಂಬಂಧಿ ಸಮಸ್ಯೆಗಳಿಗೆ ಈ ಕೇಂದ್ರ ಯಶಸ್ವಿ ಚಿಕಿತ್ಸೆ ನೀಡುತ್ತ ಜನಾನುರಾಗಿ ಆಗಿದೆ ಪ್ರಶಂಸೆ ವ್ಯಕ್ತ ಪಡಿಸಿದರು.

ಬೆನ್ನು ನೋವು ಸಂಬಂಧಿ ಸಮಸ್ಯೆಗಳನ್ನು ಉಪಶಮಣಗೊಳಿಸಲು 'ಅರ್ಥ್' ಸಂಶೋಧನಾ ಕೇಂದ್ರವು ವಿಶಿಷ್ಟ ಔಷಧಿ ಅಭಿವೃದ್ಧಿ ಪಡಿಸಿದೆ. ಆಧುನಿಕ ಜೀವನ ಶೈಲಿಯಿಂದಾಗಿ ಕಾಣಿಸಿಕೊಳ್ಳುವ ಅನೇಕ ಬಗೆಯ ಬೆನ್ನು ನೋವನ್ನು ಇದು ಪರಿಣಾಮಕಾರಿಯ ಗುಣಪಡಿಸುತ್ತದೆ. ಬಹುತೇಕ ಜನರು ಬೆನ್ನು ನೋವಿನಿಂದ ಬಳಲುತ್ತಿದ್ದಾರೆ. 40 ದಿಂದ 65 ವರ್ಷದೊಳಗಿನ ವಯಸ್ಸರಲ್ಲಿ ಇದೊಂದು ಸರ್ವೇಸಾಮಾನ್ಯ ಲಕ್ಷಣವಾಗಿದೆ. 'ಅರ್ಥ್'ನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರ ಬೆನ್ನು ನೋವಿಗೆ ಯಶಸ್ವಿ ಚಿಕಿತ್ಸೆ ಮಾಡಿರುವುದಾಗಿ ಹೇಳಿದರು.